ಗೋ ವಿಶ್ವ

Cow Universe

गौ विश्व

| ವಿರೋಧಿ ಸಂವತ್ಸರ | ವೈಶಾಖ | ಏಪ್ರಿಲ್ ೨೦೦೯ | ಸಂಪುಟ-೩ | ಸಂಚಿಕೆ-೪ |
|---|---|---|---|---|

ಗುರುವಾಣಿ

# ಸುಂದರ ಸಂಗತಿಯ ಮೌಲ್ಯ ಹೆಚ್ಚಾಗಬೇಕಾದರೆ



ಸೌಂದರ್ಯದ ಆಸ್ವಾದನೆ, ಅದರ ಬಗೆಗೆ ತಳೆಯುವ ಭಾವ, ಆಗುವ ಅನುಭಾವ ಎಲ್ಲವೂ ತಂಪೆರೆಯುವ ಸಂಗತಿಗಳು.

ಅದರೊಟ್ಟಿಗೆ ಸುಂದರ ಸಂಗತಿ ದಿನ ನಿತ್ಯಕ್ಕೆ ಬೇಕಾದ ಅನ್ನವನ್ನೂ ಕೊಟ್ಟರೆ ಅದರ ಮೌಲ್ಯ ಅಪರಂಪಾರ.

ಅಂತಹ ಮೌಲ್ಯದ ಖನಿ ನಮ್ಮ ಗೋಮಾತೆ. ಅವಳ ರೂಪ, ರಸ, ಗಂಧ, ಸ್ಪರ್ಶಗಳು ನಮ್ಮ ಮನೋ-ವಾಕ್-ಇಂದ್ರಿಯಗಳನ್ನು ಪ್ರಫುಲ್ಲಿತಗೊಳಿಸುತ್ತವೆ. ಮಹಾನಂದಿಯ (ಓಂಗೋಲ್ ಹೋರಿ) ಅಂತಹ ಆಕರ್ಷಣೆಯಿಂದಲೇ ಕಾಮದುಘಾ ಜನ್ಮತಳೆದದ್ದು.

ಗೋವು ನಮಗೆ ಮಾಡುವ ಉಪಕಾರಗಳು ಲೆಕ್ಕಕ್ಕೇ ಸಿಗುವುದಿಲ್ಲ. ಏಕೆಂದರೆ ಆ ಉಪಕಾರ ಸರಣಿಗಳು ಹೀಗೆ ಬಂದು ಹಾಗೆ ಹೋಗುವವುಗಳಲ್ಲ. ಅವು ನಮ್ಮ ದಿನ ನಿತ್ಯದ ಬದುಕಿಗೆ ಹನಿಹನಿಯಾಗಿ ಜೀವರಸವನ್ನು ಸುರಿಸಿ, ನಮ್ಮ ಬೆಳವಣಿಗೆಗೆ ಕಾರಣೀಭೂತವಾಗುತ್ತವೆ.

ಎತ್ತುಗಳು ಉಳುವಾಗ ಒಮ್ಮೆ ಗಮನಿಸಬೇಕು. ಅವು ಖಾಲಿ ಉಳುವ ಕೆಲಸವನ್ನು ಮಾತ್ರ ಮಾಡುತ್ತಿರುವುದಿಲ್ಲ. ಎತ್ತುಗಳ ನಯನಾಜೂಕಿನ ನಡೆಯಿಂದಾಗಿ ಮಣ್ಣಿನ ಜೀವಜಂತುಗಳು ಇನ್ನೂ ಚೆನ್ನಾಗಿ ಬೆಳೆಯುತ್ತವೆ. ಉಳುವಾಗ ಅಲ್ಲಲ್ಲಿ ಗೋಮೂತ್ರ-ಗೋಮಯಗಳನ್ನು ಸುರಿಸಿ, ಮತ್ತೆ ಅದರ ಮೇಲೆಲ್ಲ ಸಾಗುತ್ತ, ಅವನ್ನು ಮಣ್ಣಲ್ಲಿ ಮಣ್ಣಾಗಿಸಿ, ಮಣ್ಣನ್ನು ಹಸನಾಗಿಸುತ್ತವೆ. ಲಾರಿಗಟ್ಟಲೆ ಗೊಬ್ಬರ ಸುರಿಯುವ ಗುರಿಯಿರುವ ನಮಗೆ ಈ ಅಖಿಲ ಸೇವೆಯ ದೊಡ್ಡ ಪ್ರಯೋಜನ ಕಣ್ಣಿಗೆ ಬೀಳುವುದು ಕಷ್ಟ.

ಅಂತಹ ಎಲ್ಲ ಸಂಗತಿಗಳತ್ತ ಕಣ್ಣರಳಿಸಲು ಬಂದರೆ ಸೂಕ್ಷ್ಮ ಸಂಗತಿಗಳ ಸೌಂದರ್ಯ ದರ್ಶನವಾಗುತ್ತದೆ. ನಮ್ಮ ದೈನಂದಿನ ಬದುಕಿನ ಮೇಲಿರುವ ಭಾರೀ ಒತ್ತಡಗಳು ತಂತಾನೇ ನೀರಾಗಿ ಕರಗಿ ಹೋಗುತ್ತವೆ.

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ

### ಹೂರಣ

ಗುರುವಾಣಿ
ಗೋ ಗ್ರಾಮ ಯಾತ್ರೆ ಅನಿವಾರ್ಯವೇ?
ಪ್ರಶ್ನೋತ್ತರ
ಮಾಸದ ಗೋವು: ಕಾಸರಗೋಡು
ಗೋ ಧನ
ಕಾಮದುಘಾ ಕ್ರಮಿಸಿದ ಹಾದಿ

ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW
ಅಂತರಜಾಲ ತಾಣ: vishwagou.org
ಸಂಪರ್ಕ: govishva@gmail.com



**ಗೋವನ್ನು ನಾವು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಒಂದು ಎತ್ತಿನ ಸೆಗಣಿಯಿಂದ ಒಂದು ಸಂಸಾರ ೪ ವರ್ಷ ಜೀವನ ನಡೆಸಬಹುದು – ಭಾರತ ಸರ್ವೋಚ್ಚ ನ್ಯಾಯಾಲಯ**

ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ

## ಗೋ ಗ್ರಾಮ ಯಾತ್ರೆ ಅನಿವಾರ್ಯವೇ?

ನಾವು ಅಂದುಕೊಂಡ ಕಾರ್ಯ ಆಗಲೇಬೇಕು ಎಂದು ಎನಿಸಿದರೆ ಈ ಕಾರ್ಯದ ಅನಿವಾರ್ಯತೆ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ ಎಂದು ಹೇಳುವುದು ಸರ್ವೇಸಾಮಾನ್ಯ.

ಆದರೆ, ಈ ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ ಅಂದುಕೊಂಡ ಅನಿವಾರ್ಯತೆ ಅಲ್ಲ. ಪ್ರಸ್ತುತ, ನಮ್ಮೆಲ್ಲರ, ನಮ್ಮ ನಾಡಿನ ಅಳಿವು-ಉಳಿವಿನ ಪ್ರಶ್ನೆ ಎದುರಾಗಿದೆ. ಜೊತೆಗೇ ಆಯ್ಕೆಗಳೂ ಎರಡು ವಿಭಿನ್ನ ಆಯಾಮಗಳಲ್ಲಿ, ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿವೆ.

ಹಿತ ⊗ ಸುಖ, ನೆಮ್ಮದಿ ⊗ ಮೋಜು, ಜೀವಂತಿಕೆ ⊗ ಯಾಂತ್ರಿಕತೆ, ಪ್ರೀತಿ ⊗ ಮಮಕಾರ, ಸಹಬಾಳ್ವೆ ⊗ ಸ್ವಾರ್ಥ, ಪ್ರಕೃತಿ ⊗ ಮಾನವ, ದೀರ್ಘದೃಷ್ಟಿ ⊗ ಹ್ರಸ್ವದೃಷ್ಟಿ, ಒಟ್ಟಾರೆ ಲಾಭ ⊗ ಹಣಕಾಸಿನ ಲಾಭ, ಕೃಷಿ ⊗ ಕೈಗಾರಿಕೆ, ಗೋ ಆಧಾರಿತ ಕೃಷಿ ⊗ ಯಾಂತ್ರೀಕೃತ ಕೃಷಿ, ಗ್ರಾಮ ⊗ ನಗರ, ಗುಣಮಟ್ಟ ⊗ ಪ್ರಮಾಣ, ಊಟ ⊗ ತಿಂಡಿ, ಸುಖನಿದ್ರೆ ⊗ ಅಮಲು ; ಹೀಗೆ ಸಾಗುತ್ತಿದೆ ನಮ್ಮೆಲ್ಲರ ದ್ವಂದ್ವ ಪ್ರವಾಹ. ಉದಾತ್ತ ಪ್ರವೃತ್ತಿ ತನ್ನ ಗಟ್ಟಿತನದಿಂದ ಉಳಿದುಕೊಂಡಿದೆ. ಅದೇ ಮೋಜು-ಮಜಾದ ಸಂಕುಚಿತ ಝಲಕ್ ತನ್ನ ಮೆರುಗು ಮಾತ್ರದ ಕಾರಣದಿಂದ ಅಶಾಂತಿಯನ್ನು ಹುಟ್ಟುಹಾಕುತ್ತಿದೆ. ಆಂತರಿಕ ತುಮುಲಗಳಿಗೆ ಹೋಲಿಸಿದರೆ ಹೊರಗಿನ ಭಯೋತ್ಪಾದಕರ ದಾಳಿ ಏನೇನೂ ಅಲ್ಲ ಎನಿಸುವಷ್ಟಾಗಿದೆ.

**ಅದರ ಚಿತ್ರಗಳು ಕರಾಳ :** ರೈತ ಭೂಮಿಯನ್ನು ಹೀರಲು ನೋಡುತ್ತಾನೆ – ಹಾಗಿರುವ ಅವನಿಗೆ ತನ್ನದೇ ಹೊಲದ ಬೀಜ, ಹಟ್ಟಿಯ ಗೊಬ್ಬರ, ದನ-ಕರು ಎಲ್ಲವೂ ನಿಷ್ಪ್ರಯೋಜಕ ಎನಿಸುತ್ತದೆ – ಭಾರೀ ಕಂಪನಿಗಳ ಮುಂದೆ ಬೀಜಕ್ಕೆ, ರಾಸಾಯನಿಕ ಗೊಬ್ಬರಕ್ಕೆ, ಕೀಟನಾಶಕಗಳಿಗೆ, ಭಾರೀ ಯಂತ್ರಗಳಿಗೆ ಕೈ ಒಡ್ಡುತ್ತಾನೆ – ನಾಲ್ಕಾರು ವರ್ಷ ಆ ರೈತ ಸಾಲಸೋಲ ಮಾಡಿ ಧೂಂ ಧಾಂ ಕೃಷಿ ಮಾಡುತ್ತಾನೆ – ಷಹರದಲ್ಲಿ ಮಕ್ಕಳಿಗೆ ಓದೂ ಮಾಡಿಸುತ್ತಾನೆ, ಎಂದೂ ಕೃಷಿಕರಾಗದಂತೆ – ಒಂದೆಡೆ ಸಾಲ ಬೆಳೆಯುತ್ತದ್ದಂತೆ ಮತ್ತೊಂದೆಡೆಯಲ್ಲಿ ಭೂಮಿ ಬರಡಾಗುತ್ತಾ ಹೋಗುತ್ತದೆ – ಕಡೆಯಲ್ಲಿ ಆ ರೈತ ಕಂಗಾಲಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ಇದು ಒಬ್ಬಿಬ್ಬ ರೈತರ ಕತೆಯಲ್ಲ. ಇದು ಭಾರತದ ಜನಸಂಖ್ಯೆಯ ೭೦%ನ್ನು ಪ್ರತಿನಿಧಿಸುವ ನಮ್ಮ ರೈತಾಪಿವರ್ಗದ ದಿನನಿತ್ಯದ ವ್ಯಥೆ. ಎಲ್ಲ ರೈತರಿಗೂ ಒಂದೇ ಬಾರಿಗೆ ಬಿಸಿ ತಟ್ಟುತ್ತಿಲ್ಲ ಎಂಬುದೇ ನೆಮ್ಮದಿಯ ವಿಚಾರ.

ಹಾಗೆ ನೋಡಿದರೆ ನಮ್ಮ ಪರಿಸ್ಥಿತಿಯೇ ಎಷ್ಟೋ ಅಡ್ಡಿಯಿಲ್ಲ.

೧. ಸಾವಿರಾರು ಎಂಬ ಎಣಿಕೆಯಲ್ಲಿರುತ್ತಿದ್ದ ಕಾಡು ಪ್ರಾಣಿಗಳ ಸಂಖ್ಯೆ ಇಂದು ನೂರಾರಾಗಿದೆ.

೨. ಭೂಮಿ ಒಂದೇ ಸಮನೆ ಬೋಳಾಗುತ್ತಿದೆ. ಇನ್ನೂ ಕಾಡು ಬಾಕಿ ಇದೆ ಎಂಬುದೇ ಆಶ್ಚರ್ಯ.

೩. ರಾಷ್ಟ್ರದ ಬೆನ್ನೆಲುಬು ರೈತನ ಪ್ರಾಣವಾಗಿದ್ದ ಗೋ ಸಂತತಿ ವಿನಾಶದ ಅಂಚಿಗೆ ಬಂದು ನಿಂತಿದೆ.

೪. ೭೦ಕ್ಕೂ ಹೆಚ್ಚಿದ್ದ ಭಾರತೀಯ ಗೋ ತಳಿಗಳು ೩೩ಕ್ಕೆ ಇಳಿದಿವೆ. ಅದೂ ಏನು, ಹಲವು ತಳಿಗಳಲ್ಲಿ ಬಾಕಿ ಉಳಿದಿರುವ ಹಸುಗಳು ಹತ್ತು, ಇಪ್ಪತ್ತು, ನೂರು ಹೀಗೆ.

೫. ದೇಶಕ್ಕೆ ಸ್ವಾತಂತ್ರ್ಯ ಬರುವಾಗ ಮುನ್ನೂರರ ಆಸುಪಾಸಿನಲ್ಲಿದ್ದ ಕಸಾಯಿಖಾನೆಗಳಿಂದು ಮೂವ್ವತ್ತೈದು ಸಾವಿರದ ಗಡಿಯನ್ನು ಮೀರಿ ಬೆಳೆದಿವೆ.

ಪುಟ 4 ನೋಡಿ

## ಪ್ರಶ್ನೋತ್ತರ

ಪ್ರ: ರಾಮಚಂದ್ರಾಪುರ ಮಠದಲ್ಲಿ ಯಾವ ಯಾವ ಗವ್ಯ ಉತ್ಪನ್ನಗಳು ದೊರೆಯುತ್ತವೆ?

ಉ: ಶ್ರೀ ಮಠದಲ್ಲಿ ಶುದ್ಧ ಭಾರತೀಯ ತಳಿ ಹಸುಗಳ ಗೋಮೂತ್ರ ಮತ್ತು ಗೋಮಯದಿಂದ ಹಲವಾರು ಔಷಧೀಯ ಪದಾರ್ಥಗಳನ್ನು ತಯಾರಿಸಲಾಗುತ್ತಿದೆ. ಅಮೃತಸಾರ (ಗೋಮೂತ್ರದ ಅರ್ಕ), ನಿರ್ಮಲ ಗಂಗಾ (ಸ್ನಾನದ ಸಾಬೂನು), ಶುಚಿ ಸ್ಮಿತಾ (ದಂತ ಮಂಜನ), ಸುಕೇಶ (ಕೇಶ ಸಂರಕ್ಷಕ), ಸುರಭಿ (ಧೂಪ), ಸುಕಾಂತಿ (ಮುಖ ಸೌಂದರ್ಯ ರಕ್ಷಕ), ಸಮೃದ್ಧಿ (ಕೀಟ ನಿಯಂತ್ರಕ), ಫಲವತಿ (ಎರೆಗೊಬ್ಬರ).

ಪ್ರ: ದೇಸೀ ಹಸುಗಳ ಮುಖ್ಯ ಉತ್ಪನ್ನ ಯಾವುವು?

ಹಸು ಹಾಲು - ಮಾಂಸ ಕೊಡುವ ಒಂದು ಯಂತ್ರ ಎಂಬುದು ಪಾಶ್ಚಿಮಾತ್ಯ ಪರಿಕಲ್ಪನೆ. ಕೊಡುವವರೆಗೆ ಹಾಲು ಕರೆದುಕೋ. ನಂತರ ತಡಮಾಡದೆ ಕಸಾಯಿಖಾನೆಗೆ ದೂಡು - ಈ ಭಾವನೆ ಭಾರತದಲ್ಲೂ ವ್ಯಾಪಕವಾಗುತ್ತಿದೆ. ಇದು ಅವೈಜ್ಞಾನಿಕ ಮಾತ್ರವಲ್ಲ ಅವ್ಯವಹಾರಿಕ ಕೂಡ. ದೇಸೀ ಹಸುಗಳ ಮುಖ್ಯ ಉತ್ಪನ್ನ ಹಾಲಲ್ಲ. ಹಾಲು ಉಪ ಉತ್ಪನ್ನ. ಮುಖ್ಯ ಉತ್ಪನ್ನಗಳು ಎತ್ತುಗಳು, ಗೋಮೂತ್ರ, ಮತ್ತು ಗೋಮಯ. ಎತ್ತುಗಳು ಕೃಷಿಗೆ ಅಗತ್ಯವಾದ ಎಳೆಯುವ ಶಕ್ತಿಯನ್ನು ಒದಗಿಸುತ್ತವೆ ಹಾಗೂ ಗೋಮೂತ್ರ, ಗೋಮಯ ಸಾವಯವ ಗೊಬ್ಬರ, ಕೀಟನಾಶಕ ಹಾಗೂ ಕ್ಯಾನ್ಸರ್ ಸೇರಿದಂತೆ ಅನೇಕ ರೋಗಗಳಿಗೆ ದಿವ್ಯೌಷಧ. ಒಂದು ಹಸು ತನ್ನ ಜೀವಿತ ಕಾಲದಲ್ಲಿ ೮ - ೧೦ ವರ್ಷ ಮಾತ್ರ ಹಾಲು ಕೊಡುತ್ತದೆ. ಆದರೆ ಹುಟ್ಟಿನಿಂದ ಸಾವಿನವರೆಗೆ ಗೋಮಯ - ಗೋಮೂತ್ರ ನೀಡುತ್ತದಲ್ಲಾ. ಇದನ್ನೂ ಗಣನೆಗೆ ತೆಗೆದುಕೊಳ್ಳತಕ್ಕದ್ದು.

**– ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

ಮಾಸದ ಗೋವು

# ಕಾಸರಗೋಡು

**ಕಾಸರಗೋಡು ಕರ್ನಾಟಕಕ್ಕೆ ಸೇರಬೇಕಾದ ಭಾಗ. ಆ ಚಳವಳಿ ಎಂದೋ ಸತ್ತು ಹೋಗಿದೆ. ವಿನಾಶದ ಅಂಚಿನಲ್ಲಿರುವ ಕಾಸರಗೋಡು ಹೆಸರಿನ ಗೋತಳಿಯೊಂದರ ಬಗ್ಗೆ ತಿಳಿದುಕೊಳ್ಳೋಣ**

ಮೊನ್ನೆ ಪತ್ರಿಕೆಯೊಂದರಲ್ಲಿ ಅಮೇರಿಕಾದ ಯಾವುದೊ ವಿಶ್ವವಿದ್ಯಾನಿಲಯದಲ್ಲಿ ಗೋವುಗಳಿಗೆ ಹೆಸರಿಟ್ಟು ಕರೆದರೆ ಹೆಚ್ಚಾಗಿ ಹಾಲು ಕೊಡುವುದೆಂಬ ಸಂಗತಿ ಸಂಶೋಧನೆಯಿಂದ ಬಹಿರಂಗಗೊಂಡಿರುವುದಾಗಿ ಬರೆಯಲಾಗಿತ್ತು. ಆದರೆ ಭಾರತದಲ್ಲಿ ಸಾವಿರಾರು ವರ್ಷಗಳಿಂದಲೂ ಈ ಪದ್ಧತಿ ರೂಡಿಯಲ್ಲಿದೆ. ಮನೆಯಲ್ಲಿ ಹೆಸರಿರದ ಆಕಳೊಂದಿರುವುದು ತೀರ ಅಪರೂಪ. ಕರುವೊಂದು ಹುಟ್ಟಿಬಿಟ್ಟರಂತೂ ಮನೆಯಲ್ಲಿ ಮಗುವಿಗೆ ಹೆಸರಿಟ್ಟಷ್ಟೇ ಆಸ್ಥೆಯಿಂದ ಕರುವಿಗೂ ಹೆಸರಿಡುವ ಸಂಭ್ರಮ ಹಿರಿಕಿರಿಯರೆಲ್ಲರಲ್ಲೂ ಉಂಟಾಗುತ್ತದೆ. ಅದರ ಬಣ್ಣ, ಗಾತ್ರ, ಹುಟ್ಟಿದ ದಿನ, (ನನ್ನ ಸ್ನೇಹಿತನೊಬ್ಬನ ಮನೆಯಲ್ಲಿ ಸಂಡೆ ಅಂತ ಆಕಳೊಂದಿತ್ತು!) ನಕ್ಷತ್ರ ಇತ್ಯಾದಿಗಳೇ ಹೆಚ್ಚಿನ ಹೆಸರುಗಳಾದರೂ ಗಂಗೆ ತುಂಗೆ, ಪದ್ಮಾವತಿ, ಕಾಳಿ, ಕಪಿಲೆ ಇತ್ಯಾದಿ popular ಆದ ಹೆಸರುಗಳೂ ಇವೆ. ಇವುಗಳಲ್ಲಿ ಕಪಿಲ ಎಂಬ ಹೆಸರು ವೇದಗಳಲ್ಲೂ ಉಲ್ಲೇಖವಿದೆ ಎಂದು ಕೇಳಿದ್ದೆನಾದರೂ ಅದು ಕಪಿಲಾ ವರ್ಣದ ಒಂದು ಉತ್ಕೃಷ್ಟ ಜಾತಿಯನ್ನು ಸೂಚಿಸುವುದೆಂಬ ಪರಿಕಲ್ಪನೆಯಿರಲಿಲ್ಲ. ಅದರ ಕುರಿತಾಗಿ ಹುಡುಕಹೊರಟಾಗಿ ತೆರೆದುಕೊಂಡಿದ್ದು ಕಾಸರಗೊಡ್ ತಳಿಯೆಂಬ ಅಪೂರ್ವ ಗೋ ಸಂತತಿಯೊಂದರ ಕರುಣ ಕಥನ...



ಕಾಸರಗೋಡು, ಕೇರಳ

ಕಾಸರಗೊಡ್/ಕಾಸರಗೋಡು ತಳಿಯ ತವರು ಉತ್ತರ ಕೇರಳದ ಕಾಸರಗೋಡು ಪ್ರಾಂತ್ಯ. ಕಾಸರಗೋಡ್ ಎಂಬ ಶಬ್ದವೇ ಕುಸಿರಕೂಡ್ ಅಥವಾ ಕಂಜಿರಕುಟ್ಟೊವ್ ಎಂದು ಈಗ ಕರೆಯಲ್ಪಡುತ್ತಿರುವ ಕಾಡನ್ನು ಸೂಚಿಸುತ್ತಾದ್ದರಿಂದ ಕಂಜಿರಕುಟ್ಟೊವ್ ಕಾಡುಗಳಿರುವ ಪ್ರದೇಶಗಳಲ್ಲೆಲ್ಲ ಕಾಸರಗೊಡ್ ತಳಿ ವ್ಯಾಪಿಸಿತ್ತು ಎಂಬ ವಾದವೂ ಇದೆ. ಚಿಕ್ಕಗಾತ್ರದ ತಳಿಗಳ ವರ್ಗಕ್ಕೆ ಸೇರುವ ಕಾಸರಗೊಡ್ ಅಪರೂಪದ ಸಂವಹನಾ ಸಾಮರ್ಥ್ಯ, ವಿಶೇಷವಾಗಿ ತನ್ನ ಪುಟ್ಟಗಾತ್ರದ ಕಾರಣದಿಂದಾಗಿ ವಿದೇಶಿಯರ pet animalಗಳ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದೆ!

ಬಣ್ಣ ಸಾಮಾನ್ಯಾವಾಗಿ ಕಪ್ಪು, ಉಳಿದಂತೆ ಬಿಳಿ ಕೆಂಪು ಕೂಡ ಕಾಣಸಿಗುತ್ತವೆ. ಎತ್ತರ ೯೦ ರಿಂದ ೧೦೦ ಸೆಂಟಿಮೀಟರ್. ಕಾಸರಗೋಡ್ ತಳಿ ತನ್ನ ಖನಿಜಯುಕ್ತ ಹಾಲಿಗೆ ಪ್ರಸಿದ್ಧಿ. ಕಾಸರಗೋಡ್ ತಳಿಯ ಮತ್ತೊಂದು ವೈಶಿಷ್ಟ್ಯ ಕಪಿಲೆ ದನಗಳು.



ಕಾಸರಗೋಡು ತಳಿ. ಹಿಂದೆ ಇರುವ ವಿದೇಶೀ ಹೈಬ್ರಿಡ್ ತಳಿಯನ್ನು ಗಮನಿಸಿ. ಅವುಗಳ ಗಾತ್ರಗಳನ್ನು ಹೋಲಿಸಿ

ಕಪಿಲೆ (ಕಪಿಲಾ ವರ್ಣದ) ದನಗಳು ವೇದಕಾಲದಿಂದಲೂ ಅತ್ಯಂತ ಶ್ರೇಷ್ಠವೆಂದು ಕೊಂಡಾಡಲ್ಪಟ್ಟವು. ಕಪಿಲೆ ದನಗಳ ಉತ್ಕೃಷ್ಟತೆ ಅವುಗಳ ಎಲ್ಲ ಉತ್ಪನ್ನಗಳಲ್ಲಿಯೂ ವ್ಯಕ್ತವಾಗುತ್ತದಂತೆ. ಘೃತವಂತೂ ಅಮೃತವೆಂದೆ ಭಾವಿಸುತ್ತದೆ ಆಯುರ್ವೇದಶಾಸ್ತ್ರ. ತಾಮ್ರವರ್ಣದ ದೇಹ, ಬಿಳಿ ಕಣ್ಣು, ಉದ್ದನೆಯ ಬಾಲ, ಅಚ್ಚ ಬಿಳಿಬಣ್ಣದ ಬಾಲದ ತುದಿ, ಕಪ್ಪು ಗೊರಸು ಇದು ಕಪಿಲಾ ಗೋವುಗಳ ಸ್ಥೂಲ ಪರಿಚಯ. ಕಪಿಲೆ ದನಕ್ಕೆ ಹುಟ್ಟುವ ಕರು ಕಪಿಲೆಯೆ ಆಗಬೇಕೆಂದೇನೂ ಇಲ್ಲದ್ದರಿಂದ ಇವುಗಳೀಗ ಕಾಣಸಿಗುವುದೆ ಅಪರೂಪವಾಗಿದೆ. ಕಪಿಲೆ ದನ ಹೆಚ್ಚು ಇರುವುದು ಕಾಸರಗೊಡ್ ತಳಿಯಲ್ಲಿ, ಅಪರೂಪಕ್ಕೆ ಮಲೆನಾಡು ಗಿಡ್ಡ ತಳಿಯಲ್ಲೂ ಸಿಗುವುದಿದೆ.

**ಮೂಲ : ಕಾಸರಗೋಡು ಜಿಲ್ಲೆ - ಕೇರಳ.**
**ವಿಭಾಗ : ಕೆಲಸಗಾರ ಸಣ್ಣ ತಳಿ.**
**ಅತ್ಯಂತ ಸಣ್ಣ ಗಾತ್ರದ ಹೆಚ್ಚಿನ ರೋಗ ನಿರೋಧಕ ಶಕ್ತಿ ಹೊಂದಿದ ತಳಿ. ಹೆಚ್ಚಿನ ಸಮಯ ಹೊರಗಡೆ ಅಡ್ಡಾಡುತ್ತಾ ಕನಿಷ್ಠ ಆಹಾರದಲ್ಲಿ ಬದುಕುತ್ತವೆ.**
**ಬಣ್ಣ : ಸಾಮಾನ್ಯವಗಿ ಕಪ್ಪು ಕಂದು, ಬೂದು, ಬಿಳಿ ಬಣ್ಣದವುಗಳು ಇರುತ್ತವೆ.**
**ಮುಖ : ಸಪೂರವಾಗಿ ನೀಳವಾಗಿರುತ್ತದೆ.**
**ಕೊಂಬು : ಸಣ್ಣದು.**
**ಬಾಲ : ಉದ್ದವಾಗಿರುತ್ತದೆ.**


ಕಪಿಲೆ ವರ್ಣದ ಕಾಸರಗೋಡು ತಳಿಯ ದನ ಮತ್ತು ಬಿಳಿ ಕರು

ಅತ್ಯಂತ ಕಡಿಮೆ ಬಂಡವಾಳ ಬೇಡುವ ಕಾಸರಗೊಡ್ ತಳಿ ಶೂನ್ಯಬಂಡವಾಳ ಕೃಷಿಗೆ ಹೇಳಿ ಮಾಡಿಸಿದಂತಹದ್ದು. ಮನೆಯ ಅಕ್ಕಚ್ಚು ತರಕಾರಿ ಅನ್ನಗಳಲ್ಲೆ ಹೊಟ್ಟೆಹೊರೆದುಕೊಳ್ಳುವ ಈ ಪುಟ್ಟ ತಳಿ, ಎಂತ ಶ್ರಮದಾಯಕ ಕೆಲಸವನ್ನಾದರೂ ಚುರುಕಿನಿಂದ ಮಾಡಬಲ್ಲುದು.

ಸರಕಾರಿ ಕಡತಗಳ ಅಂಕಿಅಂಶಗಳು ಕಾಸರಗೊಡ್ ತಳಿ ಸಾವಿರಾರು ಸಂಖ್ಯೆಯಲ್ಲಿ ಇವೆಯೆಂದು ಸಾರುತ್ತವಾದರೂ ವಸ್ತುಸ್ತಿತಿ ಹಾಗಿಲ್ಲ. ಅತ್ಯಂತ ವೇಗವಾಗಿ ನಾಶವಾಗುತ್ತಿರುವ ಭಾರತೀಯ ತಳಿಗಳಲ್ಲಿ ಕಾಸರಗೊಡ್ ಕೂಡ ಒಂದು. ಆ ಕುರಿತಾಗಿ ತಕ್ಷಣ ಕ್ರಮಕೈಗೊಳ್ಳದಿದ್ದರೆ ಕಾಸರಗೊಡ್ ಜಿಲ್ಲೆ ಕರ್ನಾಟಕದ ಕೈತಪ್ಪಿ ಹೋದಂತೆ ಕಾಸರಗೊಡ್ ತಳಿ ಜಗತ್ತಿನಿಂದಲೇ ಅವಸಾನವಾದೀತು.

**- ಮಧುಕೇಶ ದೊಡ್ಡೇರಿ**

ಪುಟ 2 ರಿಂದ

## ಗೋ ಗ್ರಾಮ ಯಾತ್ರೆ ಅನಿವಾರ್ಯವೇ?

೬. ಸ್ವಾತಂತ್ರ್ಯ ನಂತರ ೮೦% ಪ್ರಮಾಣದ ಗೋವುಗಳನ್ನು ಕಳೆದುಕೊಂಡಿದ್ದೇವೆ.

ಈ ಎಲ್ಲ ಉತ್ಪಾತಗಳ ನಿವಾರಣೆ ಸದ್ಯದ ತುರ್ತು, ಅದು ಸಾರ್ವಕಾಲಿಕ ಅನಿವಾರ್ಯತೆಯೂ ಹೌದು. ಗೋ ಆಧಾರಿತ ಗ್ರಾಮ ಜೀವನ ವೇ ನಮ್ಮ ಮುಂದಿರುವ ಆಯ್ಕೆಗಳಲ್ಲಿ ಉತ್ಕೃಷ್ಟವಾದುದು. ಏಕೆಂದರೆ ಈ ಪದ್ಧತಿ ಒಂದನ್ನೊಂದು ಅರ್ಥಮಾಡಿಕೊಳ್ಳದ ವಿನಾ ಆತಂಕ ಮುಕ್ತ ಜೀವನವಿಲ್ಲ ಎಂಬ ಸತ್ಯವನ್ನು ಅಡಿಗಡಿಗೆ ಸ್ಪಷ್ಟಪಡಿಸುತ್ತಾ ಹೋಗುತ್ತದೆ. ಮಾನವ, ದನ-ಕರು, ಆಡು-ಮೇಕೆ, ಹುಲಿ-ಸಿಂಹ, ಬೆಟ್ಟ-ಗುಡ್ಡ, ಮರ-ಗಿಡ ; ಯಾವುದೇ ಇರಲಿ ಈ ವಿರಾಟ್ ಪ್ರಕೃತಿಯ ಹೆಜ್ಜೆಗೆ ಗೆಜ್ಜೆಯಾಗಿ ಬದುಕಲು ಹಚ್ಚುತ್ತದೆ.

ಈ ಎಲ್ಲ ಸಂದೇಶ ಸುಧೆಗಳನ್ನು ಹೊತ್ತು ಭಾರತದ ಮೂಲೆ-ಮಧ್ಯಗಳಲ್ಲಿ ಸಾಗಲಿರುವ ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ ಅನಿವಾರ್ಯವಲ್ಲವೇ? ಒಮ್ಮೆಯಾದರೂ ಯೋಚಿಸಿ.

## ಗೋ ಧನ

ಇದು ಬರಿಯ ಹಸುವಲ್ಲವೋ
ಇದುವೆ ಗೋವು,
ಗೋವು ನಮ್ಮಯ ದನ-ಧನ

ದನವೆ ನಮ್ಮಯ ಸಾಧನ
ದನದಿಂದ ನಮಗೆ ಇಂಧನ
ದನವೆ ನಂ ಮನೆ ಭೂಷಣ
ದನದಿಂದ ನಂ ಮನ ರಂಜನ

ದನದಿಂದ ರೋಗ ನಿವಾರಣ
ದನದ ಪೀಯೂಷ ಸೇವನ
ದನದಿಂದ ಆರೋಗ್ಯದ ರಕ್ಷಣ
ದನದಿಂದ ನಮ್ಮ ಪ್ರಾಸಾಧನ

ದನದಿಂದ ನಮ್ಮ ಪ್ರಚೋದನ
ದನದ ಬಗ್ಗೆ ಸಂಭಾಷಣ
ದನದ ಬಗ್ಗೆ ಆಂದೋಲನ
ದನಕಾಗಿ ಚಿಂತನ ಮಂಥನ

ಕಾಮದುಘಾ ಸಂಯೋಜನ
ಭಾರತದ ತಳಿ ಸಂರಕ್ಷಣ
ದೇಶದೆಲ್ಲೆಡೆ ಸಂಚಾಲನ
ಗೋವು-ಸ್ವಾಮಿಯ ದರ್ಶನ

ದನದಿಂದ ಭೂಮಿಯ ಪೋಷಣ
ದನದಿಂದ ಇಲ್ಲ ಪ್ರದೂಷಣ
ಇಂದು ಭೂಮಿಯ ಕಣಕಣ
ಸಂವೃದ್ಧಿಸಲಿ ಗೋ ದನ-ಧನ.

**- ಸತ್ಯನಾರಾಯಣ ಭಟ್**

**ಎಲ್ಲಿ ಗೋಪಾಲನೆ, ಗೋಸೇವೆ ತನ್ಮೂಲಕ ಕೃಷಿ ಕಾರ್ಯ ನಡೆಯುತ್ತದೆ ಅಲ್ಲಿ ಸಭ್ಯತೆಯ ವಿಕಾಸವಾಗುತ್ತದೆ - ರಾಲ್ಫ್ ಎ. ಹೆನ್, ಪಾಶ್ಚಿಮಾತ್ಯ ಕೃಷಿ ವಿಜ್ಞಾನಿ**

# ಕಾಮದುಘಾ ಕ್ರಮಿಸಿದ ಹಾದಿ

ನಾಡಿನೆಲ್ಲೆಡೆ ಕಾಮದುಘಾ ಯೋಜನೆ ಮನೆಮಾತಾಗಿದೆ. ಬೇಡಿದ್ದನ್ನು ಕರೆಯುವ ಯೋಜನೆಗೆ ನಾಲ್ಕು ಆಯಾಮಗಳು – ಗೋ ಸಂರಕ್ಷಣೆ, ಸಂವರ್ಧನೆ, ಸಂಶೋಧನೆ ಹಾಗೂ ಸಂಬೋಧನೆ.

ಇದು ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳ ಕನಸಿನ ಕೂಸು. ನಮ್ಮ ದೇಶೀ ಗೋವುಗಳ ದುಸ್ಥಿತಿಯನ್ನು ಮನಗಂಡ ಶ್ರೀಗಳು, ಗೋವುಗಳನ್ನು ದುಸ್ಥಿತಿಯಿಂದ ಮೇಲೆತ್ತುವುದನ್ನೇ ತಮ್ಮ ಜೀವಿತದ ಸಂಕಲ್ಪವಾಗಿಸಿಕೊಂಡರು. ಅದರಂತೆ ಶ್ರೀಗಳು ತಮ್ಮ ಪೀಠಾರೋಹಣದ ಸಂದರ್ಭದಲ್ಲಿ ಅಂದರೆ ೧೯೯೮ರ ಏಪ್ರಿಲ್ ೨೮ರಂದು ಕಾಮದುಘಾ ಯೋಜನೆಯ ಘೋಷಣೆ ಮಾಡಿದರು.




೧೯೯೮ರ ಘೋಷಣೆ ೨೦೦೦ದಲ್ಲಿ ಓಂಗೋಲ್ ತಳಿಯ ಮಹಾನಂದಿಯ ಆಗಮನದೊಂದಿಗೆ ರೂಪ ಪಡೆಯಲು ಆರಂಭಿಸಿತು. ಅದರೊಟ್ಟಿಗೆ ಸಾಹಿವಾಲ್ ಹಾಗೂ ಡಾಂಗಿ ತಳಿಯ ಗೋವುಗಳನ್ನೂ ತರಲಾಗಿತ್ತು. ಅಲ್ಲಿಂದ ದೇಶದಲ್ಲಿ ಉಳಿದಿರುವ ೩೩ ತಳಿಯ ಗೋವುಗಳ ಸಂಗ್ರಹ ಕಾರ್ಯ ಪ್ರಾರಂಭವಾಯಿತು.

ಅಲ್ಲಿಂದ ಮುಂದಕ್ಕೆ ಯೋಜನೆ ಹಲವಾರು ಮಜಲುಗಳಲ್ಲಿ ಬೆಳೆಯುತ್ತಾ ಹೋಗಿ, ಇಂದು ವಿಶ್ವವ್ಯಾಪಿ ಮನ್ನಣೆಯನ್ನು ಪಡೆಯುತ್ತಿದೆ.

**ದೊಡ್ಡ ಆಕರ್ಷಣೆ :** ಹೊಸನಗರದ ಅಮೃತಧಾರಾ ಗೋಲೋಕ. ಅಲ್ಲಿ ಭಾರತದಲ್ಲಿ ಸದ್ಯ ಲಭ್ಯವಿರುವ ೩೩ ತಳಿಯ ಗೋವುಗಳಲ್ಲಿ ೩೦ ತಳಿಯವುಗಳ ಸಂಗ್ರಹ ಇದೆ.

**ಅಲ್ಲಿರುವ ತಳಿಗಳು :** ಮಲೆನಾಡುಗಿಡ್ಡ, ಅಮೃತಮಹಲ್, ಹಳ್ಳಿಕಾರ್, ಖಿಲಾರಿ, ಜವಾರಿ, ಕೃಷ್ಣಾತೀರ, ದೇವನಿ, ಡಾಂಗಿ, ಗೌಳವ್, ಲಾಲ್‌ಕಂದಾರಿ, ವೆಚೂರ್, ಕಾಸರಗೋಡು, ಅಂಬ್ಲಾಚೆರಿ, ಬರಗೂರು, ಓಂಗೋಲ್, ಗಿರ್, ಥಾರ್‌ಪಾರ್ಕರ್, ಸಾಹಿವಾಲ್, ಸಿಂಧಿ, ಕಾಂಕ್ರೇಜ್, ರಾಠಿ, ಹರ್ಯಾಣಾ, ಮಾಳ್ವಿ, ನಿಮಾರಿ, ನಾಗೋರಿ, ಗಂಗಾತಿರಿ, ಕೆಂಕಾಥ, ಪೊನ್ವರ್, ಕೇರಿಘರ್, ಕಂಗಾಯಮ್

**ಗೋಶಾಲೆಗಳ ಸ್ಥಾಪನೆ :** ೧೩ ಕಡೆಗಳಲ್ಲಿ – ಹೊಸನಗರ, ಕಗ್ಗಲೀಪುರ, ಮುಳಿಯ, ಬಜಕೂಡ್ಲು, ಬೋಗಾದಿ, ಕೋಲ್ಹಾಡ, ಹೊಸಾಡ, ಕೈರಂಗಳ, ಶೀರೂರು, ಮಾಣಿ, ಕೊಲ್ಲಮೊಗರು, ಮಾಲೂರು, ರಾಣಿಬೆನ್ನೂರು. ಒಟ್ಟು ೨೦೦೦ದಷ್ಟು ಗೋವುಗಳನ್ನು ಲಾಲಿಸಿ, ಪಾಲಿಸಿ, ಪೋಷಿಸಲಾಗುತ್ತಿದೆ. ಗೋಕರ್ಣದಲ್ಲಿ ೧೦೦೦ ನಂದಿಗಳ ಗೋಶಾಲೆಯ ಘೋಷಣೆಯಾಗಿದೆ. ದೇಶದೆಲ್ಲೆಡೆ ಒಟ್ಟು ೧೦೮ ಗೋಶಾಲೆಗಳ ಸ್ಥಾಪನೆಯ ಯೋಜನೆ ಇದೆ.

**ಅಳಿವಿನ ಅಂಚಿನಲ್ಲಿರುವ ತಳಿಗಳ ಸಂವರ್ಧನೆಗೆ ವಿಶೇಷ ಕೇಂದ್ರಗಳು :** ಮಲೆನಾಡುಗಿಡ್ಡ ತಳಿ ಮುಳಿಯ, ಕೈರಂಗಳ, ಭಾನ್ಕುಳಿ ; ಕಾಸರಗೋಡು ತಳಿ – ಬಜಕೂಡ್ಲು ; ಕೃಷ್ಣಾತೀರ ತಳಿ – ಹೊಸನಗರ

**ಗೋ ಸಂಜೀವಿನೀ :** ಮಾರುಕಟ್ಟೆಯಲ್ಲಿ ಕಸಾಯಿಖಾನೆಗೆ ಮುಖಮಾಡಿದ ಗೋವುಗಳನ್ನು ಖರೀದಿಸುವ ವಿಶಿಷ್ಟ ಯೋಜನೆ.

**ಗೋಬ್ಯಾಂಕ್ :** ಕುಮಟಾದ ಹೊಸಾಡದಲ್ಲಿದೆ. ಇದೊಂದು ಹೊಸ

ಕಲ್ಪನೆ. ಇಲ್ಲಿ ಗೋವುಗಳೇ ವ್ಯವಹಾರದ ಮಾಧ್ಯಮ. ಬರಗಾಲ ಹಾಗೂ ಇನ್ನಿತರ ವಿಕೋಪಗಳ ಸಂದರ್ಭದಲ್ಲಿ ಕೃಷಿಕರು ತಮ್ಮ ಗೋವುಗಳನ್ನು ಇಲ್ಲಿ ತಂದು ಬಿಡಬಹುದು ಹಾಗೂ ಪರಿಸ್ಥಿತಿ ಸುಧಾರಿಸಿದ ಅನಂತರದಲ್ಲಿ ಅವುಗಳನ್ನು ಉಚಿತವಾಗಿ ವಾಪಸ್ ಪಡೆಯಬಹುದು. ಅಲ್ಲದೇ, ಅನಾಥ ಗೋವುಗಳನ್ನು ಸಾಕಿ-ಸಲಹುವುದು ಮತ್ತು ಆಸಕ್ತ ಪೋಷಕರಿಗೆ ವಿತರಿಸುವುದೂ ಉಂಟು

**ಗೋ ಮಹಾದಾನ :** ಸುಮಾರು ೩೦೦೦ಕ್ಕಿಂತಲೂ ಹೆಚ್ಚು ಗೋವುಗಳನ್ನು ಅರ್ಹ ರೈತರಿಗೆ ದಾನವಾಗಿ ಕೊಡಲಾಗಿದೆ.

**ಗವ್ಯೋತ್ಪನ್ನಗಳ ಉತ್ಪಾದನೆ :** ಗೋಮೂತ್ರ ಅರ್ಕ ಎಲ್ಲರಿಗೂ ಸುಪರಿಚಿತ. ಅದು ಕ್ಯಾನ್ಸರ್, ಸಕ್ಕರೆ ಕಾಯಿಲೆ, ರಕ್ತದೊತ್ತಡ ಸಮಸ್ಯೆಗಳಿಗೆ ಉತ್ತಮ ಪರಿಹಾರ ಎಂಬುದೇ ಅದರ ಅಗ್ಗಳಿಕೆ. ಪಂಚಗವ್ಯಗಳಾದ ಗೋಮೂತ್ರ, ಗೋಮಯ, ಹಾಲು, ಮೊಸರು, ತುಪ್ಪಗಳೊಂದಿಗೆ ಆಯುರ್ವೇದ ಗಿಡಮೂಲಿಕೆಗಳನ್ನು ಸೇರಿಸಿ ೨೫ಕ್ಕೂ ಹೆಚ್ಚು ದಿನ ಬಳಕೆಯ ಪದಾರ್ಥಗಳನ್ನು ತಯಾರಿಸಲಾಗುತ್ತದೆ. ಅರಶಿನ, ಕುಂಕುಮ, ಸಾಬೂನು, ಶ್ಯಾಂಪೂ, ದಂತಮಂಜನ; ಔಷಧಗಳಾದ ಪಂಚಗವ್ಯಾಮೃತ, ಘನವಟಿ, ಕ್ಷಾರವಟಿ, ನಿವೇದನ ಮುಲಾಮು ; ಫಲವತಿ ಎರೆ ಗೊಬ್ಬರ, ಕೀಟನಾಶಕ ಮೊದಲಾದ ಪದಾರ್ಥಗಳ ಸರಣಿಯೇ ಇದೆ.

**ಗವ್ಯ ಚಿಕಿತ್ಸಾಲಯಗಳು :** ಹೊಸನಗರ, ಬೆಂಗಳೂರು, ಮೈಸೂರು, ಹುಬ್ಬಳ್ಳಿಯಲ್ಲಿವೆ.

**ಪ್ರಕಾಶನಗಳು :** ಪುಸ್ತಕಗಳು - ಜಗನ್ಮಾತೆ ಗೋವು, ಗೋ ಆಧಾರಿತ ಕೃಷಿ, ವಿಶ್ವ ಜನನಿ; ಸಿಡಿ ಗೋವಂಶ ವೈಭವ, ಗೋವಿನ ಹಾಡುಗಳು

**ಗೋ ವಿಶ್ವಕೋಶ :** ತಯಾರಿಯ ಹಂತದಲ್ಲಿದೆ. ಸದ್ಯ ನಾಲ್ಕು ಖಂಡಗಳು ಪ್ರಕಾಶಗೊಳ್ಳಲಿವೆ.

**ಗೋ ಸಂಬಂಧೀ ಇ-ಪತ್ರಿಕೆ :** ಕನ್ನಡ ಮಾಸ ಪತ್ರಿಕೆ ಗೋವಿಶ್ವ ಕಳೆದ ೨೦ ತಿಂಗಳುಗಳಿಂದ ಪ್ರಸಾರವಾಗುತ್ತಿದೆ. ಜೊತೆಗೆ Cow Universe ಎಂಬ ಇಂಗ್ಲಿಶ್ ಆವೃತ್ತಿಯೂ ಬರುತ್ತಿದೆ.

**ಗೋ ಪರಿವಾರ :** ರಾಷ್ಟ್ರದಿಂದ ಗ್ರಾಮ ಮಟ್ಟದವರೆಗೆ ವಿವಿಧ ಹಂತಗಳಲ್ಲಿ ಗೋ ಪ್ರೇಮಿಗಳ ಏಕ ಸೂತ್ರಿತ ಸಂಘಟನೆ ರೂಪುಗೊಳ್ಳುತ್ತಿದೆ.

**ದತ್ತ ಶಂಕರ ಗೋಯಾತ್ರೆ :** ಇದು ಉತ್ತರ ದಕ್ಷಿಣಗಳ ಸೇತುವೆಯಾಗಿ ಮಾರ್ಪಟ್ಟಿತು. ಈ ಯಾತ್ರೆಯಲ್ಲಿ ರಾಜಸ್ಥಾನದ ಕಾಂಕ್ರೇಜ್ ಗೋವುಗಳನ್ನು ದಕ್ಷಿಣದ (ಸಾವಿರಾರು) ರೈತರಿಗೆ ವಿತರಿಸಲಾಯಿತು.

**ಭಾರತೀಯ ಗೋಯಾತ್ರೆ (೨೦೦೫-೦೬) :** ಭಾರತೀಯ ಗೋ ತಳಿಗಳ ಬಗೆಗೆ ಜಾಗೃತಿ ಮೂಡಿಸುವ ಸಲುವಾಗಿ ಯಾತ್ರೆಯನ್ನು ಹಮ್ಮಿಕೊಳ್ಳಲಾಯಿತು. ಈ ಯಾತ್ರೆ ದಕ್ಷಿಣ ಭಾರತದಲ್ಲಿ ೫೫೩೦ ಕಿಮೀಗಳ ಪಥವನ್ನು ಕ್ರಮಿಸಿತು.

**ಗೋ ಸಂಸತ್ (೨೦೦೬-೦೭) :** ಸಂಸತ್ ಚರ್ಚೆಯ ಮಾದರಿಯಲ್ಲಿ ಚರ್ಚೋಪಚರ್ಚೆ. ಗೋವುಗಳ ಬಗೆಗೆ ಜನ ಸಾಮಾನ್ಯರಿಗೆ ಇರುವ ಸಂದೇಹ ಪರಿಹಾರಕ್ಕೆ. ಕರ್ನಾಟಕ, ಕೇರಳ ಭಾಗಗಳಲ್ಲಿ ನಡೆಯಿತು. ವಿಶ್ವ ಗೋ ಸಮ್ಮೇಳನದಲ್ಲಿ ಸಮಾರೋಪಗೊಂಡಿತು.

**ವಿಶ್ವ ಗೋ ಸಮ್ಮೇಳನ (೨೦೦೭) :** ಜಗದೊಳಿತಿಗಾಗಿ ಜಗನ್ಮಾತೆಯ ಜಾಗತಿಕ ಹಬ್ಬ. ಏಪ್ರಿಲ್ ೨೧ ರಿಂದ ೨೯ರ ವರೆಗೆ ಹೊಸನಗರದ ಶ್ರೀರಾಮಚಂದ್ರಾಪುರಮಠದಲ್ಲಿ ಒಟ್ಟು ಒಂಭತ್ತು ದಿನಗಳ ಕಾಲ ನಡೆಯಿತು. ಸಮಾಜದ ಸಮಸ್ತರೂ ಸಮ್ಮೇಳನದಲ್ಲಿ ಪಾಲ್ಗೊಂಡು ದೇಶೀ ಗೋವುಗಳ ಬಗೆಗೆ ಚಿಂತನೆ ನಡೆಸಿದರು.

**ಗೋ ಸಂಧ್ಯಾ (೨೦೦೭) :** ಬೆಂಗಳೂರಿನ ೧೬೩ಕ್ಕೂ ಹೆಚ್ಚು ಕೇಂದ್ರಗಳಲ್ಲಿ. ಜುಲೈನಿಂದ ನವಂಬರ್‌ವರೆಗೆ. ಗೋವಿನ ಬಗೆಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಸರಣಿ.

**ಕೋಟಿ ನೀರಾಜನ (೨೦೦೭) :** ಸುಮಾರು ಒಂದು ಲಕ್ಷ ಮಾತೆಯರು ಗೋವಿಗೆ ಮಂಗಳ ನೀರಾಜನ ಗೈದ ಅಪೂರ್ವ ಕ್ಷಣಗಳಿವು. ನವೆಂಬರ್ ೧೮ರಂದು ಬೆಂಗಳೂರಿನ ಅರಮನೆ ಮೈದಾನ ಈ ಅಪರೂಪದ ನೋಟಕ್ಕೆ ಸಾಕ್ಷಿಯಾಯಿತು.

**ದೀಪಗೋಪುರ (೨೦೦೮) :** ಧಾರವಾಡವನ್ನು ದೇಶದ ಮೊದಲ (ಗೋ) ಅಭಯ ಜಿಲ್ಲೆ ಮಾಡಲು ಸಂಕಲ್ಪ ತೊಟ್ಟ ಕಾರ್ಯಕ್ರಮ ಇದಾಗಿದೆ. ಏಪ್ರಿಲ್ ೯ರಂದು ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ ನಡೆಯಿತು. ೨೦,೦೦೦ಕ್ಕೂ ಅಧಿಕ ಮಾತೆಯರು ಗೋವಿಗೆ ಮಂಗಳ ನೀರಾಜನ ಗೈದರು.

**ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ (೨೦೦೯-೧೦) :** ಇದು ಅಖಂಡ ಭಾರತವನ್ನು ಗೋವೆಂಬ ಏಕ ಸೂತ್ರದಲ್ಲಿ ಬೆಸೆಯುವ ಅಪೂರ್ವ ಯಾತ್ರೆ. ಗೋ ಆಧಾರಿತ ಗ್ರಾಮ ಜೀವನಕ್ಕೆ ಮತ್ತೆ ಮರಳುವ ಆಶಯ ಇಟ್ಟುಕೊಂಡಿದೆ. ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳ ದಿವ್ಯ ಸಂಕಲ್ಪದ ಈ ಯಾತ್ರೆಗೆ ದೇಶದ ಸಂತ-ಮಹಂತರೆಲ್ಲರ ಬೆಂಬಲ ಸಿಕ್ಕಿದೆ. ೧೦೮ ದಿನಗಳ ಈ ಯಾತ್ರೆ ಸಪ್ಟೆಂಬರ್ ೩೦ರಂದು ಕುರುಕ್ಷೇತ್ರದಲ್ಲಿ ಆರಂಭಗೊಳ್ಳಲಿದೆ. ೨೦,೦೦೦ ಕಿಮೀ ಸಂಚರಿಸುವ ಈ ಯಾತ್ರೆಯಲ್ಲಿ ೫೦ ಕೋಟಿಗೂ ಹೆಚ್ಚಿನ ಸಹಿ ಸಂಗ್ರಹದ ನಿರೀಕ್ಷೆ ಇದೆ. ಗೋವಿಗೆ ಆಗುತ್ತಿರುವ ಹಿಂಸೆಯನ್ನು ತಡೆದು, ಗೋವಿಗೆ ರಾಷ್ಟ್ರೀಯ ಪ್ರಾಣಿಯ ಸ್ಥಾನಮಾನಗಳನ್ನು ಕಲ್ಪಿಸಿಕೊಡುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

ಇಷ್ಟೆಲ್ಲದರ ಒಟ್ಟಿಗೆ ಶ್ರೀಮಠ ಒಂದಂಶವನ್ನು ಮಾತ್ರ ಗಟ್ಟಿಯಾಗಿಯೇ ಪ್ರತಿಪಾದಿಸುತ್ತಲೇ ಇದೆ. ಕೇವಲ ಗೋಶಾಲೆಗಳಿಂದ ಗೋ ಸಂರಕ್ಷಣೆಯಾಗುವುದಿಲ್ಲ. ಅದಾಗುವುದಿದ್ದರೆ ರೈತನ ಮನೆಯಿಂದ ಮಾತ್ರ. ಗೋ ಸಾಕಾಣಿಕೆ ಲಾಭದಾಯಕವಾದಾಗ ಮಾತ್ರ ಅದು ಸಾಧ್ಯ. ಲಾಭದಾಯಕವಾಗಬೇಕಾದರೆ ಹಾಲಿನ ಜೊತೆಗೆ ಗೋಮೂತ್ರ, ಗೋಮಯಗಳ ಉದ್ಯಮವೂ ಚೆನ್ನಾಗಿ ಬೆಳೆಯಬೇಕು.

**- ಭಾರತೀಶ**

## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ ೨೭, ೨೦೦೭ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ-ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು ೧೯ನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ-ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ - govishva@gmail.com